# Cries of Anguish – Report Summary
## ಸಂಕಟದ ಕೂಗು - ವರದಿಯ ಸಾರಾಂಶ

ಕರ್ನಾಟಕ, ತೆಲಂಗಾಣ ಮತ್ತು ತಮಿಳುನಾಡಿನ ಕುಟುಂಬಗಳಲ್ಲಿನ ಈ ಅಧ್ಯಯನದ ಮುಖ್ಯ ಸಂಶೋಧನೆಯು ಇದಾಗಿದೆ: ಬಡ ಪೋಷಕರು ತಮ್ಮ ಮಕ್ಕಳ ಶಿಕ್ಷಣದ ಭವಿಷ್ಯದ ಬಗ್ಗೆ ಹತಾಶರಾಗಿದ್ದಾರೆ ಮತ್ತು ದೀರ್ಘಾವಧಿಯ ಶಾಲಾ ಮುಚ್ಚುವಿಕೆಯು ಮಕ್ಕಳ ಕಲಿಕೆ, ನಡವಳಿಕೆ ಹಾಗೂ ಸಾಮಾಜಿಕ-ಭಾವನಾತ್ಮಕ ಬೆಳವಣಿಗೆಯ ಮೇಲೆ ಬೀರಿರುವ ವಿನಾಶಕಾರಿ ಪರಿಣಾಮದ ಬಗ್ಗೆ ಸಂಪೂರ್ಣ ಜಾಗೃತರಾಗಿದ್ದಾರೆ. ನಮಗೆ ತಿಳಿದಿರುವಂತೆ, ಶಾಲೆಗಳು ಪ್ರಾರಂಭವಾದ ನಂತರ, ಪೋಷಕರ ಅನುಭವಗಳು ಮತ್ತು ಗ್ರಹಿಕೆಗಳ ಕುರಿತು ಇದು ಮೊದಲ ಅಧ್ಯಯನವಾಗಿದೆ. ನೀತಿ ನಿರೂಪಕರು ಮತ್ತು ನಿರ್ವಾಹಕರು ಈ ವಾಸ್ತವದ ನಿರ್ಣಾಯಕ ಪರಿಸ್ಥಿತಿಯ ಅರಿವನ್ನು ನೀತಿಗಳು ಮತ್ತು ಯೋಜನೆಗಳನ್ನು ನಿರ್ಮಿಸುವಾಗ ಪ್ರತಿಬಿಂಬಿಸುತ್ತಾರೆ ಎಂಬುದು ನಮ್ಮ ಆಶಯ.

ಈ ವರದಿಯ ಓದುಗರು ಪರಿಮಾಣಾತ್ಮಕ ಮಾಹಿತಿ ಅಲ್ಲದೆ, ಪೋಷಕರ ವೈಯಕ್ತಿಕ ಸಾಕ್ಷ್ಯಗಳನ್ನೂ ಸಹ ನೋಡಬೇಕೆಂದು ನಾವು ಮನವಿ ಮಾಡಿಕೊಳ್ಳುತ್ತೇವೆ. ಒಟ್ಟಾಗಿ ಅವು ಈ ವರದಿಯ ಶೀರ್ಷಿಕೆಗೆ ಪ್ರೇರಣೆಯಾದ "ಸಂಕಟದ ಕೂಗು"ಗಳನ್ನು ಪ್ರತಿನಿಧಿಸುತ್ತವೆ. ಸಾಮಾನ್ಯವಾಗಿ ಈ ಭಾವನೆಗಳನ್ನು ಅಂಕಿ ಅಂಶಗಳು ಮತ್ತು ಸಂಕ್ಷಿಪ್ತ ಸಾರಾಂಶಗಳಲ್ಲಿ ಸಂಪೂರ್ಣವಾಗಿ ಸೆರೆಹಿಡಿಯಲಾಗುವುದಿಲ್ಲ. ಈ ಸಾಕ್ಷ್ಯಗಳು ಪ್ರಗತಿಯುತ ರಾಜ್ಯಗಳಲ್ಲಿನ ಪೋಷಕರಿಂದ ಬಂದಿವೆ ಎಂಬುದು ಗಮನಾರ್ಹವಾದುದು. ಅವುಗಳನ್ನು ಸುಮಾರು ಎರಡು ವರ್ಷಗಳ ಕಾಲ ಯಾವುದೇ ಅರ್ಥಪೂರ್ಣ ಶಿಕ್ಷಣವನ್ನು ಪಡೆಯದ ಸುಮಾರು 200 ಮಿಲಿಯನ್ ಶಾಲಾ ವಯಸ್ಸಿನ ಮಕ್ಕಳ ಪೋಷಕರ ಸಂಖ್ಯೆಯಿಂದ ಗುಣಿಸಿ.




ಶೇಕಡ 70 ರಿಂದ 80 ಕುಟುಂಬಗಳು ತಮ್ಮ ಮಕ್ಕಳ ಓದುವ ಮತ್ತು ಬರೆಯುವ ಸಾಮರ್ಥ್ಯ ಕುಸಿದಿದೆ ಅಥವಾ ಹಾಗೆಯೇ ಉಳಿದಿದೆ ಎಂದು ಭಾವಿಸಿದ್ದಾರೆ (ಅಥವಾ ಅವರು ನಿರ್ಣಯಿಸಲು ಸಾಧ್ಯವಾಗಲಿಲ್ಲ). ಪಾಲಕರು ತಮ್ಮ ಮಕ್ಕಳಲ್ಲಿ ಬದಲಾದ ನಡವಳಿಕೆ, ಗಮನದ ಕೊರತೆ ಹಾಗೂ ಮೊಬೈಲ್ ಫೋನ್‌ಗಳ ಚಟವನ್ನು ಒತ್ತಿ ಹೇಳುತ್ತಾರೆ. ಮಕ್ಕಳ ಸಾಮಾಜಿಕ-ಭಾವನಾತ್ಮಕ ಬೆಳವಣಿಗೆಯಲ್ಲಿನ ಈ ಬದಲಾವಣೆಗಳು ಅವರ ಕಲಿಕೆಯ ಮೇಲೆ ಪರಿಣಾಮ ಬೀರುತ್ತವೆ ಎಂದು ಅವರು ಗುರುತಿಸುತ್ತಾರೆ. ಆನ್‌ಲೈನ್ ಶಿಕ್ಷಣದ ಬಗ್ಗೆ ಅಭಿಪ್ರಾಯಗಳು ನಿಸ್ಸಂದಿಗ್ಧವಾಗಿವೆ: ಮಕ್ಕಳು ವಾಸ್ತವಿಕವಾಗಿ ಏನನ್ನೂ ಕಲಿತಿಲ್ಲ. ಆರೋಗ್ಯ ಮತ್ತು ಸುರಕ್ಷತೆಯು ಮುಖ್ಯವಾಗಿದ್ದು, ಪೋಷಕರು ಬಹುಮಟ್ಟದಲ್ಲಿ ವೈಯಕ್ತಿಕ ಕಲಿಕೆಗಾಗಿ ಶಾಲೆಗಳನ್ನು ತೆರೆದಿಡುವುದರ ಪರವಾಗಿದ್ದಾರೆ. ಜೊತೆಗೆ, ಆನ್‌ಲೈನ್ ಶಿಕ್ಷಣವು ಸಾಧನಗಳಿಗೆ ಮತ್ತು ಇಂಟರ್ನೆಟ್ ಪಾವತಿಸಲು ಪೋಷಕರ ಮೇಲೆ ಹಣಕಾಸಿನ ಹೊರೆಗಳನ್ನು ಒಡ್ಡಿತು. ಈ ಅಧ್ಯಯನವು ಶಾಲಾ ಮುಚ್ಚುವಿಕೆಯ ಅವಧಿಯು ವ್ಯವಸ್ಥೆಯಲ್ಲಿ ಅಸಮಾನತೆಯನ್ನು ಹೆಚ್ಚಿಸಿದೆ ಎಂದು

ಮುಖ್ಯವಾಗಿ ತಿಳಿಸುತ್ತದೆ: ಮಕ್ಕಳ ಆನ್‌ಲೈನ್ ಶಿಕ್ಷಣವನ್ನು ಬೆಂಬಲಿಸಲು ಸಾಧ್ಯವಾದ ಪೋಷಕರು ಸಾಂಕ್ರಾಮಿಕ ಸಮಯದಲ್ಲಿಯೂ ತಮ್ಮ ಮಕ್ಕಳು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಿದ್ದಾರೆ ಎಂಬ ಭಾವನೆ ಹೊಂದಿದ್ದಾರೆ.




*ಸಮಾಜೋ-ಆರ್ಥಿಕ ಗುಂಪುಗಳಾದ್ಯಂತ ಪೋಷಕರ ಪ್ರತಿಕ್ರಿಯೆಗಳಲ್ಲಿನ ವ್ಯತ್ಯಾಸಗಳು(ತೆಲಂಗಾಣ)*

ಐತಿಹಾಸಿಕವಾಗಿ ಹೆಚ್ಚಿನ ಮಟ್ಟದ ದಾಖಲಾತಿಯನ್ನು ಹೊಂದಿರುವ ಈ ಮೂರು ರಾಜ್ಯಗಳಲ್ಲಿನ ಈ ಸಮೀಕ್ಷೆ ಮಾದರಿಯ ಕುಟುಂಬಗಳಲ್ಲಿ, ಶಾಲಾ ಮಕ್ಕಳ ಔಪಚಾರಿಕ ದಾಖಲಾತಿ ತುಲನಾತ್ಮಕವಾಗಿ ಹೆಚ್ಚಿದೆ. ಆದಾಗ್ಯೂ, ತೆಲಂಗಾಣದ ಹಾಜರಾತಿ ದತ್ತಾಂಶವು ಕೇವಲ ಮೂರನೇ ಎರಡರಷ್ಟು ವಿದ್ಯಾರ್ಥಿಗಳು ಮಾತ್ರ ಹಿಂದಿನ ವಾರದ ಎಲ್ಲಾ ದಿನಗಳೂ ಹಾಜರಾಗಿದ್ದರು ಎಂದು ತೋರಿಸುತ್ತದೆ. ಈ ಮೂರು ರಾಜ್ಯಗಳು ಮಧ್ಯಾಹ್ನದ ಊಟ ಮತ್ತು ಪಠ್ಯಪುಸ್ತಕಗಳನ್ನು ಒದಗಿಸುವುದನ್ನು ಖಚಿತಪಡಿಸಿವೆ. ನಮ್ಮ ಸಮೀಕ್ಷೆಯು ಮಕ್ಕಳೊಂದಿಗೆ ಪುನಃ ಪಾಲ್ಗೊಳ್ಳುವ ತಮಿಳುನಾಡಿನ ನವೀನ ಸಮುದಾಯ-ಆಧಾರಿತ ಕಾರ್ಯಕ್ರಮವಾದ '*ಇಲ್ಲಂ ತೇಡಿ ಕಲ್ವಿ*'ಯ ಉನ್ನತ ಮಟ್ಟದ ಜಾಗೃತಿ ಮತ್ತು ಭಾಗವಹಿಸುವಿಕೆಯನ್ನು ಒತ್ತಿ ತೋರಿಸುತ್ತದೆ.

ಆದಾಗ್ಯೂ, ಅನೇಕ ಶಾಲೆಗಳು ಪೋಷಕರೊಂದಿಗೆ ನಿಯಮಿತ ಸಂವಹನದಲ್ಲಿ ತೊಡಗಿಸಿಕೊಂಡಿಲ್ಲ. ಕೆಲವೇ ಕೆಲವರು ಮಕ್ಕಳಿಗೆ ಹೆಚ್ಚುವರಿ ಕಲಿಕೆಯ ಬೆಂಬಲವನ್ನು (ಶಾಲೆಯ ನಂತರ ಅಥವಾ ವಾರಾಂತ್ಯದ ತರಗತಿಗಳ ಮೂಲಕ) ಒದಗಿಸುತ್ತಿದ್ದಾರೆ. ಸಾಂಕ್ರಾಮಿಕ ಸಮಯದಲ್ಲಿ ಪಾಠಗಳನ್ನು ಪ್ರಸಾರ ಮಾಡಲು ದೂರದರ್ಶನ ಮತ್ತು ರೇಡಿಯೋಗಳು ಬಳಸಲಾಗಿತ್ತು; ಈಗ ಅವುಗಳನ್ನು ಪುನಃ ಮಕ್ಕಳ ಕಲಿಕೆಯನ್ನು ಬೆಂಬಲಿಸಲು ಸೃಜನಾತ್ಮಕವಾಗಿ ಬಳಸಬಹುದಾದರೂ ತ್ಯಜಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ತುರ್ತು ಪರಿಸ್ಥಿತಿ ಒಕ್ಕೂಟದ ಆಶ್ರಯದಲ್ಲಿ ಸಮೀಕ್ಷೆಗಳನ್ನು ಮಾಡಲಾಗಿದೆ. ಪ್ರಶ್ನಾವಳಿಯನ್ನು ಅರ್ಥಪೂರ್ಣ ಶಾಲಾ ಪುನರಾರಂಭದ ಚೌಕಟ್ಟಿನ ಆಧರದ ಮೇಲೆ ವಿನ್ಯಾಸಗೊಳಿಸಲಾಗಿದೆ; ಇದು "ಎ ಫ್ಯೂಚರ್ ಅಟ್ ಸ್ಟೇಕ್ (A Future at Stake) - ಶಾಲೆ ತೆರೆಯಲು ಮಾರ್ಗಸೂಚಿಗಳು" ಎಂಬ ಪ್ರಕಟಣೆಯಲ್ಲಿ ಸಂಗ್ರಹಿಸಲಾಗಿದೆ.